प्रजा वाणी/हुबली
PRAJA VANI/HU..
14 JAN 2020

(1)

# ರೈಲು ಸೌಧ ಎದುರು ಚನ್ನಮ್ಮ ಮೂರ್ತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಗದಗ ರಸ್ತೆಯ ರೈಲು ಸೌಧದ ಆವರಣದಲ್ಲಿ 12 ಅಡಿ ಎತ್ತರದ ಕಿತ್ತೂರು ರಾಣಿ ಚನ್ನಮ್ಮ ಮೂರ್ತಿಯನ್ನು ನೈರುತ್ಯ ರೈಲ್ವೆ ಮಹಿಳಾ ಸಂಘಟನೆ ಅಧ್ಯಕ್ಷೆ ಸುಜಾತಾ ಸಿಂಗ್ ಸೋಮವಾರ ಅನಾವರಣಗೊಳಿಸಿದರು.

ಲೋಹ ಮತ್ತು ಸಿಮೆಂಟ್‌ನಿಂದ ನಿರ್ಮಿಸಲಾದ ಈ ಮೂರ್ತಿ 5 ಸಾವಿರ ಕೆಜಿ ತೂಕವಿದ್ದು, ₹2.86 ಲಕ್ಷ ವೆಚ್ಚ ಮಾಡಲಾಗಿದೆ.

ಸೌಧ ಆವರಣದಲ್ಲಿ ಪ್ರದರ್ಶನಕ್ಕಿಟ್ಟಿರುವ 38 ವರ್ಷಗಳ ಹಳೆಯದಾದ ಲೋಕೊ ಎಂಜಿನ್ 'ಗರುಡ'ವನ್ನು ರೈಲ್ವೆ ಅಧಿಕಾರಿ ಬಿ.ಜಿ. ಮಲ್ಯ ಉದ್ಘಾಟಿಸಿದರು. 112.8 ಟನ್ ಭಾರವಿದ್ದು, 44 ಲಕ್ಷ ಕಿ.ಮೀ. ಸಂಚರಿಸಿದೆ. ವಲಯದ ವ್ಯವಸ್ಥಾಪಕ ನಿರ್ದೇಶಕ ಅಜಯಕುಮಾರ ಸಿಂಗ್, ಎಜಿಎಂ ಪಿ.ಕೆ. ಮಿಶ್ರಾ, ವಿಜಯ ಅಗ್ರವಾಲ, ಹರಿಶಂಕರ ಶರ್ಮಾ ಇದ್ದರು.

ಸೌಧದ ಪ್ರದೇಶವನ್ನು ಅಂದಗೊಳಿಸುವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಉದ್ಯಾನ ಅಭಿವೃದ್ಧಿ, ಕಾರಂಜಿ ಅಳವಡಿಕೆ, ಸ್ವಾತಂತ್ರ್ಯ ಹೋರಾಟಗಾರರ ಮೂರ್ತಿಗಳನ್ನಿಡುವ ಮೂಲಕ ದೇಶ ಭಕ್ತಿ ಹೆಚ್ಚಿಸಲು ಮುಂದಾಗಿದೆ. ಸಾರ್ವಜನಿಕರ ಭೇಟಿಗೂ ಮುಕ್ತ ಅವಕಾಶವಿದೆ.



ಹುಬ್ಬಳ್ಳಿಯ ರೈಲು ಸೌಧದ ಆವರಣದಲ್ಲಿ ಚನ್ನಮ್ಮ ಮೂರ್ತಿಯನ್ನು ನೈರುತ್ಯ ರೈಲ್ವೆ ಮಹಿಳಾ ಸಂಘಟನೆ ಅಧ್ಯಕ್ಷೆ ಸುಜಾತಾ ಸಿಂಗ್ ಅನಾವರಣಗೊಳಿಸಿದರು

**ಮುಖ್ಯಾಂಶಗಳು**

- 12 ಅಡಿ ಎತ್ತರದ ಐದು ಟನ್ ತೂಕದ ಚನ್ನಮ್ಮನ ಮೂರ್ತಿ
- ₹2.86 ಲಕ್ಷ ವೆಚ್ಚದಲ್ಲಿ ಲೋಹ, ಸಿಮೆಂಟ್‌ನಿಂದ ನಿರ್ಮಾಣ

## STATUE OF KITTUR RANI CHENNAMA UNVEILED AND DISPLAY ELECTRIC LOCO PROVIDED AT "RAIL SOUDHA" OF SOUTH WESTERN RAILWAY

South Western Railway Headquarter Office "Rail Soudha" has recently been in the limelight for its spurt of beautification being taken up in its surroundings. Most recently there has been works taken up for beautifying the landscape with gardens, water fountains, miniature locomotives & busts of freedom fighters in gardens for the public visiting Headquarters office,To instill a sense of patriotism and to give a facelift Smt Sujatha Singh, President SWRWWO today unveiled the statue of Kittur Rani Chennama at the entrance of "Rail Soudha". The statue is 12 feet heigh and weighing 5,000 Kg made of Cement with metal colour. The cost of the statue is approx Rs. 2.86 lakhs.

Scanned by CamScanner

VIJAYVANI / HUBBALLI
विजयवाणी / हुबळ्ळि
14 JAN 2020



## ನೈಋತ್ಯ ರೈಲ್ವೆಯಿಂದ ಸಾರ್ವಜನಿಕರಲ್ಲಿ ದೇಶಾಭಿಮಾನ ಮೂಡಿಸುವ ಕಾರ್ಯ

# ರೈಲ್ ಸೌಧದಲ್ಲಿ ರಾಣಿ ಚನ್ನಮ್ಮ ಪುತ್ಥಳಿ ಅನಾವರಣ

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ಇಲ್ಲಿನ ಗದಗ ರಸ್ತೆಯಲ್ಲಿರುವ ನೈಋತ್ಯ ರೈಲ್ವೆ ವಲಯದ ಮುಖ್ಯ ಕಚೇರಿ ರೈಲ್ ಸೌಧದ ಆವರಣದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಪುತ್ಥಳಿ ಅನಾವರಣಗೊಳಿಸಲಾಯಿತು.

ಇತ್ತೀಚೆಗಷ್ಟೇ ರೈಲ್ ಸೌಧದ ಆವರಣದಲ್ಲಿ ಕಾರಂಜಿ ಮತ್ತಿತರ ಸೌಲಭ್ಯಗಳನ್ನು ಒದಗಿಸುವ ಮೂಲಕ ಸುಂದರವಾದ ಉದ್ಯಾನ ನಿರ್ಮಿಸಲಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಪುತ್ಥಳಿ ಸ್ಥಾಪಿಸುವ ಮೂಲಕ ನೈಋತ್ಯ ರೈಲ್ವೆ ಸಾರ್ವಜನಿಕರಲ್ಲಿ ದೇಶಾಭಿಮಾನ ಜಾಗೃತಿಗೊಳಿಸುವ ಕಾರ್ಯಕ್ಕೆ ಮುಂದಾಗಿದೆ.

ರೈಲ್ ಸೌಧದ ಮುಖ್ಯದ್ವಾರದ ಬಳಿ ಸ್ಥಾಪಿಸಿರುವ ಕಿತ್ತೂರು ರಾಣಿ ಚನ್ನಮ್ಮ ಪುತ್ಥಳಿಯನ್ನು ನೈಋತ್ಯ ರೈಲ್ವೆ ವಲಯ ಮಹಿಳಾ ಕಲ್ಯಾಣ ಸಂಸ್ಥೆ ಅಧ್ಯಕ್ಷೆ ಸುಜಾತಾ ಸಿಂಗ್ ಅನಾವರಣಗೊಳಿಸಿದರು. 2.86 ಲಕ್ಷ ಮೌಲ್ಯದ 12 ಅಡಿ ಎತ್ತರ ಹಾಗೂ 5 ಸಾವಿರ ಕೆಜಿ ತೂಕದ ಕಂಚಿನ ಬಣ್ಣದ ಸಿಮೆಂಟ್‌ನಿಂದ ನಿರ್ಮಿಸಿದ ಪುತ್ಥಳಿ ಆಕರ್ಷಕವಾಗಿದೆ.

ಇದೇ ಸಂದರ್ಭದಲ್ಲಿ ಇಲೆಕ್ಟ್ರಿಕ್ ರೈಲ್ವೆ ಇಂಜಿನ್‌ಅನ್ನು ಸಹ ಉದ್ಯಾನವನದಲ್ಲಿ ಪ್ರದರ್ಶನಕ್ಕೆ ಇಡಲಾಯಿತು. ನೈಋತ್ಯ ರೈಲ್ವೆ ವಲಯದ ಮಹಾಪ್ರಬಂಧಕ ಅಜಯಕುಮಾರ ಸಿಂಗ್ ಉದ್ಘಾಟಿಸಿದರು. ಗರುಡ ಹೆಸರಿನ ಈ ರೈಲು ಇಂಜಿನ್ 37 ವರ್ಷಗಳ ಹಿಂದೆ ಸಂಚಾರ ಪ್ರಾರಂಭಿಸಿದ್ದು, 2019ರಲ್ಲಿ ಸಂಚಾರ ಸ್ಥಗಿತಗೊಳಿಸಿತ್ತು.

ವಲಯದ ಹಿರಿಯ ಅಧಿಕಾರಿಗಳಾದ ಪಿ.ಕೆ. ಮಿಶ್ರಾ, ವಿಜಯ ಅಗ್ರವಾಲ, ಹರಿಶಂಕರ ವರ್ಮಾ, ಶಿವರಾಜ ಸಿಂಗ್, ಪಿ. ರವಿಕುಮಾರ, ಅರವಿಂದ ಮಾಳಖೇಡ್ ಮತ್ತಿತರರಿದ್ದರು.



ವಿಜಯವಾಣಿ ಚಿತ್ರ

ಹುಬ್ಬಳ್ಳಿಯಲ್ಲಿನ ನೈಋತ್ಯ ರೈಲ್ವೆ ವಲಯದ ಮುಖ್ಯ ಕಚೇರಿ ರೈಲ್ ಸೌಧದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಪುತ್ಥಳಿ ಅನಾವರಣಗೊಳಿಸಲಾಯಿತು. ನೈಋತ್ಯ ರೈಲ್ವೆ ವಲಯ ಮಹಿಳಾ ಕಲ್ಯಾಣ ಸಂಸ್ಥೆ ಅಧ್ಯಕ್ಷೆ ಸುಜಾತಾ ಸಿಂಗ್ ಹಾಗೂ ಮತ್ತಿತರರಿದ್ದರು.

**STATUE OF KITTUR RANI CHENNAMA UNVEILED AND DISPLAY ELECTRIC LOCO PROVIDED AT "RAIL SOUDHA" OF SOUTH WESTERN RAILWAY**

South Western Railway Headquarter Office "Rail Soudha" has recently been in the limelight for its spurt of beautification being taken up in its surroundings. Most recently there has been works taken up for beautifying the landscape with gardens, water fountains, miniature locomotives & busts of freedom fighters in gardens for the public visiting Headquarters office,To instill a sense of patriotism and to give a facelift Smt Sujatha Singh, President SWRWWO today unveiled the statue of Kittur Rani Chennama at the entrance of "Rail Soudha". The statue is 12 feet heigh and weighing 5,000 Kg made of Cement with metal colour. The cost of the statue is approx Rs. 2.86 lakhs.

Scanned by CamScanner

KANNADA PRABHA / HUBBALLI
कन्नड़ प्रभा / हुब्बल्लि
14 JAN 2020

(3)

# ರೈಲ್ವೆ ಸೌಧದಲ್ಲಿ ಚೆನ್ನಮ್ಮ ಪುತ್ಥಳಿ ಅನಾವರಣ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಇಲ್ಲಿನ ಗದಗ ರಸ್ತೆಯಲ್ಲಿನ ನೈಋತ್ಯ ರೈಲ್ವೆಯ ರೈಲ್ವೆಸೌಧ ಕಚೇರಿ ಆವರಣದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಪುತ್ಥಳಿ ಹಾಗೂ ಡಿ ಕಮೀಷನ್ ಆಗಿರುವ 37 ವರ್ಷ ಸೇವೆಯಲ್ಲಿದ್ದ ರೈಲ್ವೆ ಎಂಜಿನ್ ಲೋಕೋ 'ಗರುಡ'ವನ್ನು ಸೋಮವಾರ ಅನಾವರಣಗೊಂಡಿದೆ.

ದೇಶಭಕ್ತಿಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಪ್ರತಿಮೆಯನ್ನು ₹ 2.86 ಲಕ್ಷ ವೆಚ್ಚದಲ್ಲಿ ರೂಪಿಸಲಾಗಿದೆ. ಸಿಮೆಂಟ್‌ನಿಂದ ನಿರ್ಮಿಸಲಾದ 12 ಅಡಿ ಎತ್ತರದ ಪುತ್ಥಳಿಯು ಲೋಹದ ಬಣ್ಣ ನೀಡಲಾಗಿದೆ. ಒಟ್ಟಾರೆ. 5,000 ಕೆಜಿ ತೂಕವಿದೆ. ಈಚೆಗೆ ನೈಋತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಘಟನೆ ಅಧ್ಯಕ್ಷೆ ಸುಜಾತಾ ಸಿಂಗ್ ಉದ್ಘಾಟಿಸಿದರು.

ಬಳಿಕ 37 ವರ್ಷದ ಹಳೆಯ ರೈಲ್ವೆ ಎಂಜಿನ್ ಲೋಕೋ ಗರುಡವನ್ನು ಪ್ರಿನ್ಸಿಪಲ್ ಚೀಫ್ ಎಲೆಕ್ಟ್ರಿಕಲ್ ಎಂಜಿನಿಯರ್ ಬಿ.ಜಿ. ಮಲ್ಯ ಅನಾವರಣಗೊಳಿಸಿದರು. 1982ರಿಂದ ಸತತ 37 ವರ್ಷ ಕಾರ್ಯನಿರ್ವಹಿಸಿದ್ದ ಈ ಎಂಜಿನ್ 44 ಲಕ್ಷ ಕಿಮೀ ಪ್ರಯಾಣಿಸಿದೆ. 112.8 ಟನ್ ಇರುವ ಈ ಎಂಜಿನ್‌ನ್ನು 2019ರಲ್ಲಿ ಡಿ ಕಮೀಷನ್ ಮಾಡಲಾಗಿತ್ತು.



ಚೆನ್ನಮ್ಮ ಪುತ್ಥಳಿಯನ್ನು ರೈಲ್ವೆ ಸೌಧದಲ್ಲಿ ಅನಾವರಣಗೊಳಿಸಲಾಯಿತು.

ಈ ವೇಳೆ ನೈಋತ್ಯ ರೈಲ್ವೆ ಮಹಾಪ್ರಬಂಧಕ ಅಜಯಕುಮಾರ ಸಿಂಗ್, ಸಹ ವ್ಯವಸ್ಥಾಪಕ ಪಿ.ಕೆ. ಮಿಶ್ರಾ, ಪ್ರಿನ್ಸಿಪಲ್ ಚೀಫ್ ಎಂಜಿನಿಯರ್ ವಿಜಯ ಅಗರವಾಲ್, ಪ್ರಿನ್ಸಿಪಲ್ ಚೀಪ್ ಆಪರೇಶನ್ ಮ್ಯಾನೇಜರ್ ಹರಿಶಂಕರ ವರ್ಮಾ ಹಾಗೂ ಅಧಿಕಾರಿಗಳಾದ ಶಿವರಾಜ ಸಿಂಗ್, ಪಿ. ರವಿಕುಕಾರ, ಅರವಿಂದ ಮಾಲ್ಖೆಡೆ ಸೇರಿದಂತೆ ಹಲವರಿದ್ದರು. ನೈಋತ್ಯ ರೈಲ್ವೆ ಕಚೇರಿಗಳ ಸುತ್ತಲಿನ ಉದ್ಯಾನವನ ಸೌಂದರ್ಯೀಕರಣ ಕಾಮಗಾರಿ ನಡೆಸುತ್ತಿದ್ದು, ಇದರ ಅಂಗವಾಗಿ ಪುತ್ಥಳಿ ಹಾಗೂ ಹಳೆ ಎಂಜಿನ್‌ಗಳನ್ನು ಪ್ರದರ್ಶನಕ್ಕೆ ಇಡಲಾಗುತ್ತಿದೆ.

[Same as Page No. 1, 2]

Scanned by CamScanner

प्रजा वाणी/हुबली
PRAJA VANI/HUB[illegible]

(4)

14 JAN 2020

# ನೈರುತ್ಯ ರೈಲ್ವೆ ಎಂಜಿನಿಯರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯದ ಅವಧಿಯಲ್ಲಿ ಆದಾಯ ಮೀರಿ ಸುಮಾರು ₹ 2.25 ಕೋಟಿ ಮೌಲ್ಯದ ಆಸ್ತಿಯನ್ನು ಸಂಪಾದಿಸಿದ ಆರೋಪದಡಿ ನೈರುತ್ಯ ರೈಲ್ವೆ ವಲಯದ ಕಾರ್ಯನಿರ್ವಾಹಕ ಎಂಜಿನಿಯರ್ (ನಿರ್ಮಾಣ ವಿಭಾಗ) ಘನಶ್ಯಾಮ್ ಪ್ರಧಾನ್ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ.

ಮೈಸೂರು ವಿಶ್ವೇಶ್ವರನಗರದ ನಿವಾಸಿ ಘನಶ್ಯಾಮ್ ವಿರುದ್ಧ ಭ್ರಷ್ಟಚಾರ ತಡೆ ಕಾಯ್ದೆ ಅಡಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದೆ.

1988ರಲ್ಲಿ ಆಗ್ನೇಯ ರೈಲ್ವೆ ವಿಭಾಗದಲ್ಲಿ ಕಾಮಗಾರಿ ನಿರೀಕ್ಷಕರಾಗಿ ಘನಶ್ಯಾಮ್ ಪ್ರಧಾನ್ ನೇಮಕವಾಗಿದ್ದರು. ನಂತರ ಬಡ್ತಿ ಪಡೆದು ವಿವಿಧ ಜಿಲ್ಲೆಯಲ್ಲಿ ಕರ್ತವ್ಯ ಸಲ್ಲಿಸಿದ್ದಾರೆ. 2010ರ ಏ. 1ರಿಂದ 2019ರ ಡಿ. 31ರ ಅವಧಿಯಲ್ಲಿ ಮೈಸೂರು, ಹಾಸನ, ದಾವಣಗೆರೆ, ಹಾವೇರಿಯಲ್ಲಿ ರೈಲ್ವೆ ಇಲಾಖೆ ಕೈಗೊಂಡ ವಿವಿಧ ಕಾಮಗಾರಿಗಳಲ್ಲಿ ಗುತ್ತಿಗೆ ಕಂಪನಿ ಜತೆ ಶಾಮೀಲಾಗಿ ಅಕ್ರಮ ಎಸಗಿದ್ದಾರೆ ಎಂದು ಆರೋಪಿಸಲಾಗಿದೆ.

Shri Ghansham Pradhan, exective Engineer of South Western Railway construction unit was arrested by CBI for making illegally proparties on Rs.2.25crores and CBI larged FIR against him.

Scanned by CamScanner

VIJAYVANI / HUBBALLI
विजयवाणी / हुब्बल्लि

(5)

14 JAN 2020

# ರೈಲ್ವೆ ಇಂಜಿನಿಯರ್ ವಿರುದ್ಧ ದೂರು

**ಬೆಂಗಳೂರು:** ಆದಾಯ ಮೀರಿ ಅಧಿಕ ಆಸ್ತಿ ಸಂಪಾದನೆ ಮಾಡಿರುವ ಆರೋಪದಡಿ ನೈಋತ್ಯ ರೈಲ್ವೆ ವಲಯ ಕಾರ್ಯನಿರ್ವಾಹಕ ಇಂಜಿನಿಯರ್ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ.

**» ಆದಾಯ ಮೀರಿ 2.25 ಕೋಟಿ ರೂ. ಆಸ್ತಿ ಗಳಿಕೆ ಆರೋಪ**

ಬೆಂಗಳೂರಿನ ಘನಶ್ಯಾಮ್ ಪ್ರಧಾನ್ ಆರೋಪಿತರು. ಆದಾಯ ಮೀರಿ ಆಸ್ತಿ ಗಳಿಕೆ ಆರೋಪದಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಇವರ ವಿರುದ್ಧ ಸಿಬಿಐ ಎಸಿಬಿ ವಿಭಾಗ ಪ್ರಕರಣ ದಾಖಲಿಸಿದೆ.

1988ರಲ್ಲಿ ಆಗ್ನೇಯ ರೈಲ್ವೆ ವಿಭಾಗದಲ್ಲಿ ಕಾಮಗಾರಿ ನಿರೀಕ್ಷಕರಾಗಿ ಘನಶ್ಯಾಮ್ ನೇಮಕವಾಗಿದ್ದು, ಬಡ್ತಿ ಪಡೆದು ವಿವಿಧ ಜಿಲ್ಲೆಯಲ್ಲಿ ಕೆಲಸ ಮಾಡಿದ್ದಾರೆ. ಸದ್ಯ ನೈಋತ್ಯ ವಲಯ ರೈಲ್ವೆ ವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿದ್ದು, 2010 ರಿಂದ 2019ರ ವರೆಗೆ ಮೈಸೂರು, ಹಾಸನ, ದಾವಣಗೆರೆ ಮತ್ತು ಹಾವೇರಿಯಲ್ಲಿ ನಡೆದ ವಿವಿಧ ಕಾಮಗಾರಿಗಳಲ್ಲಿ ಗುತ್ತಿಗೆ ಕಂಪನಿ ಜತೆ ಶಾಮೀಲಾಗಿ ಅಕ್ರಮ ಎಸಗಿದ್ದಾರೆ. ಕೃಷಿ ಇನ್‌ಫ್ರಾಟೆಕ್ ಗುತ್ತಿಗೆ ಕಂಪನಿ ಜತೆ ಹೊಂದಾಣಿಕೆ ಮಾಡಿಕೊಂಡು ಲಂಚ ಪಡೆದಿದ್ದಾರೆ. ಈ ಅವಧಿಯಲ್ಲಿ ಘನಶ್ಯಾಮ್ ಮತ್ತು ಅವರ ಕುಟುಂಬಸ್ಥರ ಹೆಸರಿನಲ್ಲಿ 2.25 ಕೋಟಿ ರೂ. ಮೌಲ್ಯದ ಆಸ್ತಿ ಸಂಪಾದನೆಯಾಗಿದೆ. ಅದಕ್ಕೆ ಯಾವುದೇ ದಾಖಲೆಗಳಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಸಿಬಿಐ ಎಸ್‌ಪಿ ಥಾಮ್ಸನ್ ಜೋಸ್ ತಿಳಿಸಿದ್ದಾರೆ.

Shri Ghansham Pradhan, exective Engineer of South Western Railway construction unit was arrested by CBI for making illegally proparties on Rs.2.25crores and CBI larged FIR against him.

Scanned by CamScanner

THE HINDU / HUBBALLI
द हिन्दू / हुब्बल्लि
14 JAN 2020

6

# Railways invites RFQ from private train operators

## Aim is to cater to 'huge', unmet demand, says official

**N. ANAND**
CHENNAI

Indian Railways has invited interested parties to submit a Request for Qualification (RFQ) document by January 17 for selection of private parties to operate 150 passenger trains on 100 routes.

The Ministry of Railways and NITI Aayog said the indicative cost of investment would be about ₹22,500 crore.

As per the draft proposal, the Ministry has grouped routes into 12 clusters that are to be operated through Public Private Partnership (PPP) on design, build, finance and operate basis, with a concession period of 35 years. Railways will adopt a 2-stage bidding process for selecting bidders. The first stage involves qualification.



Short-listed applicants will be eligible to take part in the second stage comprising Request for Proposals.

The entire project is expected to be awarded in about 180 days from January 2020. Each bidder is entitled to bid for a maximum of three clusters. Selection would be based on highest revenue share. The project work broadly includes designing, procurement, financing and operation and maintenance of passenger trains comprising a minimum of 16 coaches with the right to collect market-linked fares.

Mumbai-New Delhi, Chennai-Okhla, Howrah-Chennai, New Delhi-Howrah, Shalimar-Pune and New Delhi-Patna are some of the routes on which private trains will operate.

"The idea here is to meet the huge unmet demand that led to loss of passenger business to other modes in recent times," said a senior official.

Quoting a market assessment study, he said during 2017-18, total reserve passengers were 0.65 billion, whereas waitlisted passengers were 88.5 billion.

Scanned by CamScanner

TARUN BHARAT / BELGAVI
तरुण भारत / हुब्बळ्ळि

(7)

14 JAN 2020

# रेल्वे स्थानकाचे काम रखडले त्वरित पूर्ण करण्याची मागणी

प्रतिनिधी
बेळगाव

बेळगाव रेल्वेस्थानकाचा कायापालट करण्यात येत आहे. परंतु रेल्वेचे काम अत्यंत धिम्यागतीने करण्यात येत आहे. प्लॅटफॉर्म क्रमांक १ चे सुरू असणारे काम मागील महिन्याभरापासून बंद असल्यामुळे नाराजी व्यक्त होत आहे. हे काम त्वरित पूर्ण करण्याची मागणी करण्यात येत आहे.

रेल्वेस्थानकांवर टर्मिनल उभारण्यासाठी मुख्य इमारत कोसळण्यात येत आहेत. याबरोबर एक नवा मार्ग घालण्याचे कामही सुरू आहे. परंतु हे काम दिवसेंदिवस रखडत चालले आहे. प्लॅटफॉर्म क्रमांक एकचे काम हाती घेण्यात आले असतानाही ते मागील महिन्याभरापासून बंद ठेवण्यात आले आहेत. काम वेळेत पूर्ण करण्याकडे रेल्वे अधिकाऱ्यांचे दुर्लक्ष होत आहे. अधिकारी दुर्लक्ष करीत असल्यामुळे काम संथगतीने सुरू आहे. काम लवकर पूर्ण करण्याच्या सूचना रेल्वे राज्यमंत्र्यांच्या केल्या असतानाही त्याकडे दुर्लक्ष करण्यात येत आहे.



**बेळगाव : रखडत असलेल्या रेल्वे प्लॅटफॉर्मचे काम.**

TARUN BHARAT / BELGAVI
तरुण भारत / हुबळि

14 JAN 2020

(8)

# दुरुस्ती कामानिमित्त काही रेल्वे रद्द



**बेळगाव :** हुबळी–धारवाडदरम्यान रेल्वेमार्गाच्या दुरुस्तीचे काम करण्यात येणार असल्यामुळे काही रेल्वे उशिराने तर काही रेल्वे काही दिवसांकरिता रद्द करण्यात आल्या आहेत. रेल्वे (क्र. ११३०३) मनगुरू–कोल्हापूर ही रेल्वे दि. १४ ते १८ दरम्यान हुबळी स्थानकावरून ४५ मि. उशिरा धावणार आहे. रेल्वे (क्र. ५१४१९) मिरज–हुबळी पॅसेंजर ही रेल्वे दि. १४ ते १९ दरम्यान रद्द करण्यात आली असल्याची माहिती रेल्वे विभागाने दिली आहे.

Scanned by CamScanner

(9)

VIJAYVANI / HUBBALLI
विजयवाणी / हुब्बल्लि

14 JAN 2020

## ರೈಲು ತಾತ್ಕಾಲಿಕ ಸ್ಥಗಿತ

ಬೆಳಗಾವಿ: ಹುಬ್ಬಳ್ಳಿ-ಧಾರವಾಡ ಮಧ್ಯದ ರೈಲು ಹಳಿಗಳ ಕಾಮಗಾರಿ ಕೈಗೊಂಡ ಹಿನ್ನೆಲೆಯಲ್ಲಿ ಮಿರಜ್- ಹುಬ್ಬಳ್ಳಿ ರೈಲು ಸಂಚಾರವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಹುಬ್ಬಳ್ಳಿ- ಮಿರಜ್‌ಗೆ ಹೋಗುವ, ಮಿರಜ್‌ನಿಂದ ಹುಬ್ಬಳ್ಳಿಗೆ ಬರುವ ರೈಲನ್ನು (ಸಂಖ್ಯೆ 51420, 51419) ಜ. 12, 14, 15, 16, 18, 19 ರಂದು ಸ್ಥಗಿತಗೊಳಿಸಲಾಗಿದೆ ಎಂದು ನೈಋತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

REGULATION/CANCELLATION OF TRAINS

Line block has been permitted for carrying out safety related track work between Hubballi-Dharwad section on 12th, 14th, 15th, 16th, 18th and 19th January, 2020. As such,Train No. 11303 Manuguru-Kolhapur Express journey commencing on 13th,14th, 15th, 17th and 18th January 2020 will be regulated for 45 minutes at enroute stations upto Hubballi,Train No. 51419 Miraj-Hubballi Passenger and Train No. 51420 Hubballi-Miraj Passenger journey commencing on 12th,14th, 15th,16th,18th and 19th January 2020 will remain cancelled

---

THE NEW INDIAN EXPRESS / HUBBALLI
द न्यू इंडियन एक्सप्रेस / हुब्बल्लि

14 JAN 2020

## Prepaid auto kiosk at Hubballi railway station

Hubballi: Hubballi railway divisional manager Arvind Malkhede inaugurated a prepaid autorickshaw kiosk at the main entrance of Hubballi railway station recenlty. Auto fares for all the destinations within Hubballi city has been fixed and passengers have to pay accordingly. With this, there will be no scope for overcharging by drivers.ENS

Scanned by CamScanner

ಪ್ರಜಾ ವಾಣಿ/ಹುಬ್ಬಳ್ಳಿ
PRAJA VANI/HUB 14 JAN 2020 (10)

## ಬಹುದಿನಗಳ ಬೇಡಿಕೆ: ಫೆ. 9ರಿಂದ ಆರಂಭವಾಗುವ ನಿರೀಕ್ಷೆ

# ಬೆಳಗಾವಿ–ಪುಣೆ: ಜನಶತಾಬ್ದಿ ರೈಲು

• ಎಂ. ಮಹೇಶ

**ಬೆಳಗಾವಿ:** ಕುಂದಾನಗರಿ ಬೆಳಗಾವಿಯಿಂದ ವಾಣಿಜ್ಯ ನಗರಿ ಪುಣೆಗೆ ನೇರ ರೈಲು ಸೌಕರ್ಯ ಒದಗಿಸಬೇಕು ಎನ್ನುವ ಇಲ್ಲಿನ ಜನರ ಬಹುದಿನಗಳ ಬೇಡಿಕೆ ಈಡೇರಿಸಲು ರೈಲ್ವೆ ಖಾತೆ ರಾಜ್ಯ ಸಚಿವ ಸುರೇಶ ಅಂಗಡಿ ಕ್ರಮ ಕೈಗೊಂಡಿದ್ದಾರೆ. ಜನಶತಾಬ್ದಿ ರೈಲಿಗೆ ಮಂಜೂರಾತಿ ಕೊಡಿಸಿದ್ದು, ಫೆಬ್ರುವರಿ ತಿಂಗಳಲ್ಲಿ ತವರಿಗೆ ಮತ್ತೊಂದು ಕೊಡುಗೆ ನೀಡಲಿದ್ದಾರೆ.

ಪ್ರಜಾವಾಣಿ ವಿಶೇಷ

ಫೆ. 9ರಿಂದ ರೈಲು ಸಂಚಾರ ಆರಂಭವಾಗುವ ನಿರೀಕ್ಷೆ ಇದೆ. ಪುಣೆಯಲ್ಲಿ ಲೋಕಾರ್ಪಣೆ ಸಮಾರಂಭ ಆಯೋಜಿಸುವ ಸಾಧ್ಯತೆ ಇದೆ. ನೈರುತ್ಯ ರೈಲ್ವೆಗೆ ಸೇರಿದ ಈ ಹೊಸ ರೈಲು ಸದ್ಯದ ಮಾಹಿತಿ ಪ್ರಕಾರ, ಬೆಳಿಗ್ಗೆ 6ಕ್ಕೆ ಪುಣೆಯಿಂದ ಹೊರಟು ಮಧ್ಯಾಹ್ನ 2ಕ್ಕೆ ಬೆಳಗಾವಿ ನಿಲ್ದಾಣ ತಲುಪಲಿದೆ. ಅಧಿಕೃತ ವೇಳಾಪಟ್ಟಿಯನ್ನು ಇಲಾಖೆಯಿಂದ ಸಿದ್ಧಗೊಳಿಸಿ ಪ್ರಕಟಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪ್ರಯಾಣದರ ಪಟ್ಟಿ ಹಾಗೂ ಎಲ್ಲೆಲ್ಲಿ ನಿಲುಗಡೆ ಇರುತ್ತದೆ ಎನ್ನುವ ಮಾಹಿತಿ ಕೂಡ ಇನ್ನಷ್ಟೇ ಪ್ರಕಟವಾಗಬೇಕಿದೆ.

**ಬಸ್‌ಗಳ ಅವಲಂಬನೆ:** ಪ್ರಸ್ತುತ ಬೆಂಗಳೂರು ಅಥವಾ ಹುಬ್ಬಳ್ಳಿಯಿಂದ ಹೊರಡುವ ಕೆಲವು ರೈಲುಗಳು ಬೆಳಗಾವಿ ಮೂಲಕ ಪುಣೆಗೆ ಹೋಗುತ್ತಿವೆ. ಆದರೆ, ಬೆಳಗಾವಿ–ಪುಣೆ ನಡುವೆ ಪ್ರತ್ಯೇಕವಾದ ರೈಲಿನ ಸೌಕರ್ಯ ಇರಲಿಲ್ಲ.

ಪ್ರಯಾಣಿಕರು ದುಬಾರಿ ದರ ಕೊಟ್ಟು ಸಾರಿಗೆ ಅಥವಾ ಖಾಸಗಿ ಬಸ್‌ಗಳಲ್ಲಿ ಸಂಚರಿಸಬೇಕಾದ ಅನಿವಾರ್ಯತೆ ಇದೆ. ಪ್ರಸ್ತಾವಿತ ಪುಣೆ-ಬೆಳಗಾವಿ ಜನಶತಾಬ್ದಿ ರೈಲು ಆರಂಭವಾದಲ್ಲಿ ಬಸ್‌ಗಳ ಮೇಲಿನ ಅವಲಂಬನೆ ಕಡಿಮೆಯಾಗುವ ನಿರೀಕ್ಷೆ ಇದೆ. ಅಲ್ಲದೇ, ಎರಡೂ ನಗರಗಳಲ್ಲೂ ವಾಣಿಜ್ಯ ಚಟುವಟಿಕೆಗಳ ವೃದ್ಧಿಗೂ ಅನುಕೂಲವಾಗಲಿದೆ ಎನ್ನುವ ಆಶಾಭಾವ ಇಲಾಖೆಯದು.

**ಮುಖ್ಯಾಂಶಗಳು**

- ತವರಿಗೆ ಸುರೇಶ ಅಂಗಡಿ ಕೊಡುಗೆ
- ಹುಬ್ಬಳ್ಳಿವರೆಗೆ ವಿಸ್ತರಿಸುವ ಉದ್ದೇಶ
- ವೇಳಾಪಟ್ಟಿ ಶೀಘ್ರವೇ ಪ್ರಕಟ ನಿರೀಕ್ಷೆ



**ಬೆಂಗಳೂರು–ಕಾರವಾರ, ಬೆಂಗಳೂರು–ಮಂಗಳೂರು ರೈಲುಗಳನ್ನೂ ಶೀಘ್ರವೇ ಆರಂಭಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ**

**ಸುರೇಶ ಅಂಗಡಿ**
ರೈಲ್ವೆ ಖಾತೆ ರಾಜ್ಯ ಸಚಿವ

ಪುಣೆ–ಬೆಳಗಾವಿ ನಡುವೆ 416 (ರೈಲು ಮಾರ್ಗ) ಕಿ.ಮೀ. ಅಂತರವಿದೆ. ಪ್ರಸ್ತಾವಿತ ರೈಲು ಗಂಟೆಗೆ ಸರಾಸರಿ 70 ಕಿ.ಮೀ. ವೇಗದಲ್ಲಿ ಸಂಚರಿಸಲಿದೆ. ಎಸಿ ಚೇರ್ ಕಾರ್, ಎಕ್ಸಿಕ್ಯುಟಿವ್ ಕಾರ್ ಹಾಗೂ ಸೆಕೆಂಡ್ ಸೀಟಿಂಗ್ ಸೇರಿದಂತೆ 20 ಬೋಗಿಗಳನ್ನು ಹೊಂದಿರಲಿದೆ ಎಂದು ಮೂಲಗಳು ತಿಳಿಸಿವೆ.

**ವಿಸ್ತರಣೆಗೆ ಕ್ರಮ:** ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಚಿವ ಸುರೇಶ ಅಂಗಡಿ, 'ಪುಣೆ-ಬೆಳಗಾವಿ ರೈಲು ಬಹುದಿನಗಳ ಬೇಡಿಕೆಯಾಗಿತ್ತು. ಇದಕ್ಕೆ ಅನುಮೋದನೆ ಕೊಡಿಸಿದ್ದೇನೆ. ಕರ್ನಾಟಕ ಹಾಗೂ ಮಹಾರಾಷ್ಟ್ರ ಬೆಸೆಯುವ ಈ ರೈಲಿನಿಂದ ಇಲ್ಲಿನ ಪ್ರಯಾಣಿಕರು ಹಾಗೂ ವಾಣಿಜ್ಯೋದ್ಯಮಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಪುಣೆಗೆ ಹೋಗಲು ಗೋವಾದವರು ಕೂಡ ಬಂದು ರೈಲು ಬಳಸಬಹುದಾಗಿದೆ. ಸದ್ಯಕ್ಕೆ ಬೆಳಗಾವಿವರೆಗೆ ಸಂಚರಿಸಲಿದೆ. ಈ ರೈಲನ್ನು ಹುಬ್ಬಳ್ಳಿವರೆಗೂ ವಿಸ್ತರಣೆ ಮಾಡಬೇಕು ಎನ್ನುವ ಉದ್ದೇಶವಿದೆ. ಫೆ.9ರಂದು ಪುಣೆಯಲ್ಲಿ ಉದ್ಘಾಟನೆ ಹಮ್ಮಿಕೊಳ್ಳುವುದಕ್ಕೆ ಯೋಜಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಪ್ರಸ್ತುತ, ಹುಬ್ಬಳ್ಳಿಯಿಂದ ಬೆಳಗಾವಿ ಮಾರ್ಗವಾಗಿ ನಿತ್ಯವೂ ಹುಬ್ಬಳ್ಳಿ–ಲೋಕಮಾನ್ಯ ತಿಲಕ್ ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತಿದೆ. ಅಲ್ಲದೇ, ವಾರದಲ್ಲಿ ವಾರಕ್ಕೊಮ್ಮೆ, ಎರಡು ವಾರಕ್ಕೊಮ್ಮೆ ಹಾಗೂ ಮೂರು ವಾರಕ್ಕೊಮ್ಮೆ ಬೆಂಗಳೂರು ಅಥವಾ ಹುಬ್ಬಳ್ಳಿಯಿಂದ ಪುಣೆಗೆ ಹೋಗುವ 14 ರೈಲುಗಳು ಬೆಳಗಾವಿ ಮೂಲಕ ಸಂಚರಿಸುತ್ತವೆ. ಇಲ್ಲಿ ನಿಲುಗಡೆಯನ್ನೂ ಕೊಡುತ್ತವೆ. ಇವುಗಳಲ್ಲಿ ಸೀಟು ಹಿಡಿಯಲು ಪ್ರಯಾಣಿಕರು ಪರದಾಡುವುದು ಸಾಮಾನ್ಯವಾಗಿದೆ. ಹೊಸ ರೈಲು ಬಂದಲ್ಲಿ, ಪುಣೆ-ಬೆಳಗಾವಿ ನಡುವಿನ ಸಂಚಾರ ಸುಗಮವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

The Prajavani News Paper has Carried article that Belagavi to Pune Janshatabdi to Start from February 9th.

Scanned by CamScanner

KANNADA PRABHA / HUBBALLI
कन्नड़ प्रभा /
14 JAN 2020



# ರೈಲ್ವೆಯಿಂದ ಮೊದಲ ಪಾಡ್ ಹೋಟೆಲ್

## ಮುಂಬೈ ರೈಲು ನಿಲ್ದಾಣಗಳಲ್ಲಿ ಅಗ್ಗದ ದರಕ್ಕೆ ರಾತ್ರಿ ಹೊತ್ತು ತಂಗಲು ಅವಕಾಶ

ಮುಂಬೈ: ದೂರದ ಊರುಗಳಿಂದ ಆಗಮಿಸಿ ರಾತ್ರಿ ವೇಳೆ ತಂಗಲು ಕಡಿಮೆ ಬೆಲೆಯ ಹೋಟೆಲ್ ಹುಡುಕಲು ಪರದಾಡುವ ಪ್ರಯಾಣಿಕರ ಅನುಕೂಲಕ್ಕಾಗಿ ರೈಲ್ವೆ ಇಲಾಖೆ 'ಪಾಡ್ ಹೋಟೆಲ್'ಗಳನ್ನು ತೆರೆಯಲು ಮುಂದಾಗಿದೆ. ಮುಂಬೈ ಸೆಂಟ್ರಲ್ ರೈಲು ನಿಲ್ದಾಣದ ಮೊದಲ ಮಹಡಿಯಲ್ಲಿರುವ 2 ಹವಾನಿಯಂತ್ರಿತ ಪ್ರಯಾಣಿಕರ ನಿರೀಕ್ಷಣಾ ಕೊಠಡಿಗಳಲ್ಲಿ 30 ಪಾಡ್ ಹೋಟೆಲ್‌ಗಳನ್ನು ನಿರ್ಮಿಸಲು ಹೊರಟಿದೆ. ಈ ಸಂಬಂಧ ಐಆರ್‌ಸಿಟಿಸಿ ಟೆಂಡರ್ ಅನ್ನೂ ಆಹ್ವಾನಿಸಿದೆ. ಎಲ್ಲವೂ ಅಂದುಕೊಂಡಂತೆಯೇ ನಡೆದರೆ 2020ರ ಡಿಸೆಂಬರ್‌ನಲ್ಲಿ ರೈಲ್ವೆಯ ಮೊದಲ ಪಾಡ್ ಹೋಟೆಲ್ ಮುಂಬೈನಲ್ಲಿ ಕಾರ್ಯಾರಂಭಿಸಲಿದೆ. ಇದು ರೈಲ್ವೆಯ ಮೊದಲ ಪಾಡ್ ಹೋಟೆಲ್ ಆಗಿರಲಿದೆ. ದೇಶದ ಮೊದಲ ಪಾಡ್ ಹೋಟೆಲ್ ಅನ್ನು ಖಾಸಗಿ ಕಂಪನಿಯೊಂದು 2017ರಿಂದ ಮುಂಬೈನ ಅಂಧೇರಿಯಲ್ಲಿ ನಿರ್ವಹಿಸುತ್ತಿದೆ. ರಾತ್ರಿ ವೇಳೆ 12 ತಾಸು ತಂಗಲು ಪಾಡ್ ಹೋಟೆಲ್‌ನಲ್ಲಿ ಅವಕಾಶವಿರುತ್ತದೆ. ಇಲ್ಲಿ ಎರಡು ಮಾದರಿ ಕೋಣೆಗಳು ಇರುತ್ತವೆ. ಕ್ಲಾಸಿಕ್ ಎಂಬ ದರ್ಜೆಯಲ್ಲಿ ಒಬ್ಬ ಪ್ರಯಾಣಿಕ ತಂಗಬಹುದು. ಲಾಕರ್, ಬ್ಯಾಗ್ ಇಡಲು ಜಾಗ ಹಾಗೂ ಮೊಬೈಲ್ ಚಾರ್ಜಿಂಗ್ ಸೌಲಭ್ಯ ಇರುತ್ತದೆ. ಸ್ವೀಟ್ ಎಂಬ ಮತ್ತೊಂದು ದರ್ಜೆಯಲ್ಲಿ ಇಬ್ಬರು ಮಲಗಬಹುದಾದ ಹಾಸಿಗೆ, ವೈಫೈ ಹಾಗೂ ಲಾಕರ್ ಸೌಲಭ್ಯ ಇರುತ್ತದೆ. ಇದಲ್ಲದೆ ಲಾಂಜ್ ಪ್ರದೇಶ, ಬಟ್ಟೆ ಬದಲಿಸಲು ಕೋಣೆ, ವಾಶ್ ರೂಂ, ಕೆಫಿಟೇರಿಯಾ ಎಲ್ಲ ಸೌಲಭ್ಯಗಳು ಇರುತ್ತವೆ. ರೈಲು ನಿಲ್ದಾಣಗಳಲ್ಲಿ ಬಾಡಿಗೆಗೆ ಲಭ್ಯ ಇರುವ ಕೋಣೆಗಳಿಗಿಂತ ಪಾಡ್ ಹೋಟೆಲ್ ದರ ಕಡಿಮೆ ಇರುತ್ತದೆ.



### ಏನಿದು ಪಾಡ್ ಹೋಟೆಲ್?



ಒಬ್ಬರು ಅಥವಾ ಇಬ್ಬರು ಮಲಗಬಹುದಾದ, ಒಂದರ ಪಕ್ಕ ಹಾಗೂ ಒಂದರ ಮೇಲೊಂದರಂತೆ ನಿರ್ಮಿಸಲಾದ ಕ್ಯಾಪ್ಸೂಲ್ ಶೈಲಿಯ ಕೋಣೆಗಳೇ ಪಾಡ್ ಹೋಟೆಲ್. ಇವು ವಿಶ್ವಾದ್ಯಂತ ಜನಪ್ರಿಯ. ರಾತ್ರಿ ತಂಗಲು ಹೋಟೆಲ್‌ಗೆ ಹೋದರೆ ದುಬಾರಿ ಬೆಲೆ ತೆರಬೇಕಾಗುತ್ತದೆ. ಆದರೆ ಪಾಡ್ ಹೋಟೆಲ್ ಅಗ್ಗವಾಗಿರುತ್ತವೆ.

two non air-conditioned waiting rooms at mumbai central railway station. will soon be turned in to Indian railways first Pod hotel a building with large numbers of extremely small and ultra modern capsules of rooms. That provide cheap overnight accommodation.

Scanned by CamScanner